ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 22-01-1976--ಪಾರ್ಟ್-1

# *ವರ್ತಮಾನ ಅಂತಿಮ ಸಮಯದ ತೀವ್ರ ಪುರುಷಾರ್ಥ*

(वर्तमान लास्ट समय का फास्ट पुरूषार्थ)

**ವಿಶ್ವಕಲ್ಯಾಣಕಾರಿ, ವಿಶ್ವಸೇವಾಧಾರಿ ಮತ್ತು ಆತ್ಮರನ್ನು ಪದಮಾಪದಮ್ ಸೌಭಾಗ್ಯಶಾಲಿಯಾಗಿ ತಯಾರು ಮಾಡುವ ಭಾಗ್ಯ-ವಿಧಾತಾ ಪರಮಾತ್ಮ ಶಿವ ಹೇಳಿದರು.**

ಇಂದು ವಿಶೇಷವಾಗಿ ಅತಿಸ್ನೇಹಿ, ಅಗಲಿಮರಳಿ ಸಿಕ್ಕಿರುವ ಮಿಲನವನ್ನಾಚರಿಸುವ ಚೈತನ್ಯ ಚಾತ್ರಕ ಮಕ್ಕಳ ಮುಖವನ್ನು ನೋಡುವುದಕ್ಕಾಗಿ ಬಾಪ್‌ದಾದಾರವರು ಬಂದಿದ್ದಾರೆ. ಈ ರೀತಿ ಸದಾ ಮಿಲನದ ಸಂಕಲ್ಪದಲ್ಲಿ, ಸದಾ ಇದೇ ಲಗನ್ನಿನಲ್ಲಿ ತೊಡಗಿರುವ ಮಕ್ಕಳು ಎಷ್ಟು ನೆನಪು ಮಾಡುತ್ತಾರೆ, ಅದಕ್ಕೆ ಬಾಪ್‌ದಾದಾರವರೂ ರಿಟರ್ನ್ ಸಹ ಅಷ್ಟೇ ಕೊಡುತ್ತಾರೆ. ಇಂತಹ ಪದಮಾಪದಮ್ ಭಾಗ್ಯಶಾಲಿ ಆತ್ಮರು ತಂದೆಗೂ ಪ್ರಿಯರಾಗಿದ್ದಾರೆ ಮತ್ತು ವಿಶ್ವದಲ್ಲಿಯೂ ಪ್ರಿಯರಾಗಿದ್ದಾರೆ. ಮಕ್ಕಳು ತಂದೆಯನ್ನು ಹೇಗೆ ಆಹ್ವಾನ ಮಾಡುತ್ತಾರೆಯೋ ಹಾಗೆಯೇ ವಿಶ್ವದ ಆತ್ಮರೂ ಸಹ ತಾವೆಲ್ಲಾ ಸರ್ವಶ್ರೇಷ್ಠ ಆತ್ಮರ ಆಹ್ವಾನವನ್ನು ಮಾಡುತ್ತಿದ್ದಾರೆ. ಆಹ್ವಾನದ ಈ ಆಲಾಪವು ಕಿವಿಗಳಿಗೆ ಕೇಳಿಬರುತ್ತದೆ. ವಿಶೇಷವಾಗಿ ಈ ಸಂಧ್ಯಾಸಮಯದಲ್ಲಿ ಯಾವಾಗ ಸೂರ್ಯಾಸ್ತವಾಗುತ್ತದೆ, ಇಂತಹ ಸಮಯದಲ್ಲಿ ತಂದೆಯ ಜೊತೆಜೊತೆಗೆ ಜ್ಞಾನಸೂರ್ಯನ ಜೊತೆಜೊತೆಯಲ್ಲಿ ಅದೃಷ್ಟ ನಕ್ಷತ್ರಗಳು- ಅಂಧಕಾರವನ್ನು ಸಮಾಪ್ತಿಗೊಳಿಸಿ ಜ್ಯೋತಿಸ್ವರೂಪವೆಂದು ತಿಳಿದು ಈ ಹದ್ದಿನ ಪ್ರಕಾಶತೆ(ನಕ್ಷತ್ರ)ಗೆ ನಮಸ್ಕಾರ ಮಾಡುತ್ತಾರೆ. ಇದು ಯಾರ ನೆನಪಾರ್ಥವಾಗಿದೆ? ಪ್ರತಿನಿತ್ಯವೂ ಶ್ರೇಷ್ಠ ಆತ್ಮರಾದ ತಮಗೆ ನಮಸ್ಕಾರವಾಗುತ್ತದೆ ಎಂದು ಅನುಭವವಾಗುತ್ತದೆಯೇ? ಏಕೆಂದರೆ ತಂದೆಯೂ ಸಹ ಇಂತಹ ಶ್ರೇಷ್ಠ ಆತ್ಮರಿಗೆ ಅಥವಾ ವಿಶ್ವಕ್ಕೆ ಅಥವಾ ಬ್ರಹ್ಮಾಂಡದ ಮಾಲೀಕ ಆತ್ಮರಿಗೆ ಪ್ರತಿನಿತ್ಯ ನಮಸ್ಕಾರ ಮಾಡುತ್ತಾರೆ. ಅಂದಮೇಲೆ ವಿಶ್ವದ ಆತ್ಮರೂ ಸಹ ಪ್ರತಿನಿತ್ಯ ನಮಸ್ಕಾರ ಮಾಡುವ ನಿಮಯವನ್ನು ಮಾಡಿಕೊಂಡಿದ್ದಾರೆ. ಸ್ವಯಂನ್ನು ಇಂತಹ ನಮಸ್ಕಾರಕ್ಕೆ ಯೋಗ್ಯರಾಗಿರುವವರು ಎಂದು ಅನುಭವ ಮಾಡುತ್ತೀರಾ? ಈ ಗಾಯನ ಹಾಗೂ ಪೂಜೆಯಂತು - ಹಳಬರಿಗೆ ಅಥವಾ ಅನನ್ಯ ಮಕ್ಕಳಿಗಾಗಿ ಇದೆ ಎಂದಂತೂ ತಿಳಿಯುವುದಿಲ್ಲ ತಾನೆ?

ಬಾಪ್‌ದಾದಾರವರ ನಯನಗಳಲ್ಲಿ ಹೊಸ ಹೊಸ ತೀವ್ರ ಪುರುಷಾರ್ಥದಿಂದ ನಡೆಯುವವರು ವಿಶೇಷವಾಗಿ ಸಮಾವೇಶವಾಗಿದ್ದಾರೆ. ಹೇಗೆ ಮಕ್ಕಳ ನಯನಗಳಲ್ಲಿ ಸದಾ ತಂದೆಯು ಸಮಾವೇಶವಾಗಿದ್ದಾರೆ. ಸದಾ ಜೊತೆಯ ಮತ್ತು ಸಮೀಪದ ಅನುಭವ ಮಾಡುತ್ತಾರೆ. ಹಾಗೆಯೇ ನಿಧಾನವಾಗಿ ಬಂದಿದ್ದರೂ ತಂದೆಯು ದೂರವಿಲ್ಲ. ಸಮೀಪವಿದ್ದಾರೆ ಆದ್ದರಿಂದ ಡ್ರಾಮಾದಲ್ಲಿ ಅಂತ್ಯದಲ್ಲಿ ಬರುವಂತಹ ಮಕ್ಕಳಿಗಾಗಿ ಹೈಜಂಪ್‌ನ ಮೂಲಕ ಫಾಸ್ಟ್ ಅರ್ಥಾತ್ ಫಸ್ಟ್‌ನಲ್ಲಿ ಹೋಗುವಂತಹ ಗೋಲ್ಡನ್ ಚಾನ್ಸ್ (ಸ್ವರ್ಣಾವಕಾಶ)ನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳುತ್ತಾ ಸಂಪೂರ್ಣ ಗಮನವನ್ನಿಡಬೇಕು. ಬಾಪ್‌ದಾದಾರವರೂ ಸಹ ಹೊಸಮಕ್ಕಳ ಉಮ್ಮಂಗ, ಉತ್ಸಾಹ ಮತ್ತು ಸಾಹಸವನ್ನು ನೋಡಿ ಹರ್ಷಿತವಾಗುತ್ತಾರೆ ಮತ್ತು ಜೊತೆಜೊತೆಯಲ್ಲಿ ಸಹಯೋಗ ಮತ್ತು ವಿಶೇಷವಾಗಿ ಸ್ನೇಹವನೂ ಕೂಡುತ್ತಿದ್ದಾರೆ.

ಈಗ ಈ ವರ್ಷದಲ್ಲಿ ವಿಶ್ವದ ಆತ್ಮರ ಅನೇಕಪ್ರಕಾರದ ಇಚ್ಛೆಗಳು ಅಂದರೆ ಕಾಮನೆಗಳನ್ನು ಪೂರ್ಣ ಮಾಡುವಂತಹ ಧೃಡಸಂಕಲ್ಪವನ್ನು ಧಾರಣೆ ಮಾಡಿ. ಅನ್ಯರ ಇಚ್ಛೆಗಳನ್ನು ಪೂರ್ಣ ಮಾಡುವುದು ಅರ್ಥಾತ್ ಸ್ವಯಂನ್ನು ಇಚ್ಛಾ ಮಾತ್ರಂ ಅವಿದ್ಯಾ ಮಾಡಿಕೊಳ್ಳುವುದಾಗಿದೆ. ಹೇಗೆ ಕೊಡುವುದು ಅಂದರೆ ತೆಗೆದುಕೊಳ್ಳುವುದಾಗಿದೆ. ಹಾಗೆಯೇ ಅನ್ಯರ ಇಚ್ಛೆಗಳನ್ನು ಪೂರ್ಣ ಮಾಡುವುದು ಅಂದರೆ ಸ್ವಯಂನ್ನು ಸಂಪನ್ನರನ್ನಾಗಿ ಮಾಡಿಕೊಳ್ಳುವುದಾಗಿದೆ. ವರ್ತಮಾನದ ಅಂತಿಮ ಸಮಯದ ತೀವ್ರ

ಪುರುಷಾರ್ಥವೂ ಇದೇ ಆಗಿದೆ. ಒಂದೇ ಸಮಯದಲ್ಲಿ ಡಬಲ್ ಕಾರ್ಯವನ್ನು ಮಾಡಬೇಕಾಗಿದೆ. ಅದು ಯಾವುದಾಗಿದೆ? ಅನ್ಯರಿಗೆ ಕೊಡುವುದು ಅರ್ಥಾತ್ ಸ್ವಯಂನಲ್ಲಿಯೂ ತುಂಬಿಸಿಕೊಳ್ಳುವುದು. ಅರ್ಥಾತ್ ಅನ್ಯರನ್ನು ತಯಾರು ಮಾಡುವುದೇ ಆ ರೀತಿ ಆಗುವುದಾಗಿದೆ. ಹೇಗೆ ಭಕ್ತಿಮಾರ್ಗದಲ್ಲಿ ಯಾವ ವಸ್ತುವಿನ ಕೊರತೆಯಿರುತ್ತದೆಯೋ ಅದೇ ವಸ್ತುವನ್ನು ದಾನ ಮಾಡುತ್ತಾರೆ. ಅಂದಮೇಲೆ ದಾನ ಕೊಡುವುದರಿಂದ ಆ ವಸ್ತುವು ಎಂದೂ ಸಹ ಕಡಿಮೆಯಾಗುವುದಿಲ್ಲ. ಅಂದಾಗ ಕೊಡುವುದರ ಅರ್ಥವಾಗಿದೆ ತೆಗೆದುಕೊಳ್ಳುವುದು. ಅದೇರೀತಿ ಯಾವ ಸಭೆಕ್ಟನಲ್ಲಿ, ಯಾವ ವಿಶೇಷತೆಯಲ್ಲಿ, ಸ್ವಯಂನಲ್ಲಿ ಯಾವ ಗುಣದ ಕೊರತೆಯಿದೆಯೆಂದು ಅನುಭವ ಮಾಡುತ್ತೀರೋ ಆ ವಿಶೇಷತೆ ಅಥವಾ ಗುಣದ ದಾನ ಮಾಡಿ ಅರ್ಥಾತ್ ಅನ್ಯಆತ್ಮರ ಪ್ರತಿ ಸೇವೆಯಲ್ಲಿ ತೊಡಗಿಸುತ್ತೀರೆಂದರೆ ಸೇವೆಯ ರಿಟರ್ನ್‌ನಲ್ಲಿ ಪ್ರತ್ಯಕ್ಷಫಲವಾಗಿ ಹಾಗೂ ಪ್ರತಿಫಲದ ರೂಪದಲ್ಲಿ ತಮ್ಮಲ್ಲಿದೆ ಎಂದು ಅನುಭವ ಮಾಡುತ್ತೀರಿ. ಸೇವೆ ಅರ್ಥಾತ್ ಮೇವಾ(ಫಲ) ಸಿಗುವುದಾಗಿದೆ. ಈಗ ಪುರುಷಾರ್ಥಕ್ಕಾಗಿ ಇಷ್ಟು ಸಮಯವಿಲ್ಲ ಆದ್ದರಿಂದ ಮೊದಲು ಸ್ವಯಂನಪ್ರತಿ ಸಮಯವನ್ನು ಕೊಡಿ, ನಂತರ ಅನ್ಯರ ಸೇವೆಯಪ್ರತಿ ಸಮಯವನ್ನು ಕೊಡಿ. ಫಾಸ್ಟ್ ಪುರುಷಾರ್ಥ ಅರ್ಥಾತ್ ಸ್ವಯಂ ಹಾಗೂ ಅನ್ಯ ಆತ್ಮರ ಜೊತೆಜೊತೆಯಾಗಿ ಸೇವೆಯಾಗಲಿ. ಪ್ರತೀಕ್ಷಣ, ಪ್ರತೀ ಸಂಕಲ್ಪದಲ್ಲಿ ಸ್ವಯಂನ ಕಲ್ಯಾಣ ಮತ್ತು ವಿಶ್ವದ ಕಲ್ಯಾಣದ ಭಾವನೆಯು ಜೊತೆಜೊತೆಯಲ್ಲಿರಲಿ. ಒಂದೇ ಸೆಕೆಂಡಿನಲ್ಲಿ ಡಬಲ್ ಕಾರ್ಯವಾದಾಗ ಡಬಲ್ ಕಿರೀಟಧಾರಿ ಆಗುತ್ತೀರಿ. ಒಂದುವೇಳೆ ಒಂದು ಸಮಯದಲ್ಲಿ ಒಂದೇ ಕಾರ್ಯವನ್ನು ಮಾಡುತ್ತೀರೆಂದರೆ ಸ್ವಯಂನ ಹಾಗೂ ವಿಶ್ವದ ಒಂದುಸಮಯವೂ ಸಹ ಒಂದುಕಾರ್ಯವನ್ನು ಮಾಡುವ ಪ್ರಾಲಬ್ಧವಾಗಿ ಹೊಸಪ್ರಪಂಚದಲ್ಲಿ ಒಂದು ಪ್ರಕಾಶತೆಯ ಕಿರೀಟ ಅರ್ಥಾತ್ ಪವಿತ್ರಜೀವನ, ಸುಖ-ಸಂಪತ್ತಿರುವ ಜೀವನವು ಪ್ರಾಪ್ತವಾಗುತ್ತದೆ. ಆದರೆ ರಾಜ್ಯದ ಸಿಂಹಾಸನ ಮತ್ತು ಕಿರೀಟವು ಪ್ರಾಪ್ತಿಯಾಗುವುದಿಲ್ಲ ಅರ್ಥಾತ್ ಪ್ರಜಾಪದವಿಯ ಪ್ರಾಲಬ್ಧವಾಗುತ್ತದೆ. ಅಂದಮೇಲೆ ಡಬಲ್ ಕಿರೀಟವನ್ನು ಪ್ರಾಪ್ತಿ ಮಾಡಿಕೊಳ್ಳಲು ಆಧಾರವಾಗಿದೆ - ಪ್ರತೀ ಸಮಯದಲ್ಲಿ ಡಬಲ್ ಸೇವೆ ಅಂದರೆ ಸ್ವಯಂನ ಹಾಗೂ ಅನ್ಯಆತ್ಮರ ಸೇವೆಯನ್ನು ಮಾಡುವುದು. ಇದು ಲಾಸ್ಟ್ ಸೋ ಫಾಸ್ಟ್ ಪುರುಷಾರ್ಥವಾಗಿದೆ. ಈ ರೀತಿ ಫಾಸ್ಟ್ ಪುರುಷಾರ್ಥವನ್ನು ಮಾಡುತ್ತೀರಾ? ವರ್ತಮಾನ ಸಮಯದಲ್ಲಿ ಇಂತಹ ಪರಿಶೀಲನೆಯನ್ನು ವಿಶೇಷರೂಪವಾಗಿ ಮಾಡಿರಿ. ಈ ಸಾಧನದ ಮೂಲಕವೇ ಸ್ವಯಂನ ಹಾಗೂ ಸಮಯದ ಪರಿವರ್ತನೆ ಮಾಡುವಿರಿ, ಒಳ್ಳೆಯದು-

ಇಂತಹ ಸದಾ ಭರವಸೆಯಿರುವ, ಸ್ವಯಂನ ಹಾಗೂ ವಿಶ್ವದ ಪರಿವರ್ತಕರು, ಬಾಪ್‌ದಾದಾರವರ ಸಮಾನ ಸದಾ ವಿಶ್ವಕಲ್ಯಾಣದ ಶುಭಭಾವನೆಯಲ್ಲಿ ಇರುವಂತಹ ಸರ್ವ ಆತ್ಮರ ಸರ್ವಕಾಮನೆಗಳನ್ನು ಸಂಪನ್ನಗೊಳಿಸುವ ತೀವ್ರ ಪುರುಷಾರ್ಥಿಗಳಿಗೆ, ಸಮಯ ಹಾಗೂ ಸಂಕಲ್ಪವನ್ನು ಸೇವೆಯಲ್ಲಿ ತೊಡಗಿಸುವಂತಹ ವಿಶ್ವಸೇವಾಧಾರಿ, ವಿಶ್ವ ಕಲ್ಯಾಣಕಾರಿ, ಸರ್ವಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

ಅವ್ಯಕ್ತ ಮುರಳಿ 22-01-1976-- ಪಾರ್ಟ್-1

***ವರ್ತಮಾನ ಅಂತಿಮ ಸಮಯದ ತೀವ್ರ ಪುರುಷಾರ್ಥ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮಿಲನ ಮತ್ತು ಸಂಕಲ್ಪದಲ್ಲಿ ಸದಾ ಲಗನ್ನಿನಿಂದ ಮಗ್ನವಾಗಿ ತಂದೆಯನ್ನು ಸ್ಮೃತಿ ಮಾಡುವ ಪದಮಾಪದಂ ಭಾಗ್ಯಶಾಲಿ.

2. ನಾನು ತಂದೆಗೆ ಮತ್ತು ವಿಶ್ವಕ್ಕೆ ಪ್ರಿಯವಾಗಿದ್ದೇನೆ.

3. ನಾನು ಸಂಧ್ಯಾ ಸಮಯದಲ್ಲಿ ಸೂರ್ಯನೊಂದಿಗೆ  ಅಂಧಕಾರದಿಂದ ತೊಲಗಿಸುವ ಅದೃಷ್ಟ ನಕ್ಷತ್ರವಾದ ನನ್ನನ್ನು ಜ್ಯೋತಿಸ್ವರೂಪ ಎಂದು ಭಾವಿಸಿ ವಿಶ್ವಾತ್ಮರು ನನಗೆ ನಮಸ್ಕರಿಸುವ ಶ್ರೇಷ್ಠಾತ್ಮ.

4. ನನ್ನ ಧೈರ್ಯ, ಉಲ್ಲಾಸಗಳಿಂದ ನಾನು ಬಾಪ್‌ದಾದಾರವರಿಂದ ಸಹಯೋಗವನ್ನು ಮತ್ತು ವಿಶೇಷ ಸ್ನೇಹವನ್ನು ಪಡೆದಿದ್ದೇನೆ.

5. ವಿಶ್ವಾತ್ಮರ ಅನೇಕ ವಿಧವಾದ ಇಚ್ಛೆಗಳನ್ನು ಅರ್ಥಾತ್ ಮನೋಕಾಮನೆಗಳನ್ನು ಪೂರ್ಣ ಮಾಡಬೇಕೆಂಬ ದೃಢ ಸಂಕಲ್ಪದಿಂದ ಇಚ್ಛಾ ಮಾತ್ರಮ್ ಅವಿದ್ಯಾ ಸ್ಥಿತಿಗೆ ತಲುಪಿದ್ದೇನೆ.

6. "ಇತರರ ಇಚ್ಛೆಗಳನ್ನು ಪೂರ್ತಿ ಮಾಡುವುದು ಅರ್ಥಾಥ್ ಸ್ವಯಂ ಅನ್ನು ಸಂಪನ್ನವಾಗಿ ತಯಾರು ಮಾಡಿಕೊಳ್ಳುವುದು" ಎಂಬ ತಂದೆಯ ಮಹಾ ವಾಕ್ಯವನ್ನು ಸ್ಮೃತಿಯಲ್ಲಿಟ್ಟುಕೊಂಡು ತೀವ್ರ ಪುರುಷಾರ್ಥವನ್ನು ಮಾಡಿ ಸಂಪನ್ನವಾಗಿ ತಯಾರಾಗಿದ್ದೇನೆ.

7. ನಾನು ಯಾವ ವಿಶೇಷತೆ ಅಥವಾ ಯಾವ ಗುಣದಲ್ಲಿ ಸ್ವಯಂ ಅನ್ನು ಬಲಹೀನವಾಗಿ ಅನುಭವ ಮಾಡಿಕೊಳ್ಳುತ್ತೇನೆಯೋ, ಆ ವಿಶೇಷತೆಯನ್ನು ಅಥವಾ ಗುಣವನ್ನು ಇತರ ಆತ್ಮರಿಗಾಗಿ ಸೇವೆಯಲ್ಲಿ ಉಪಯೋಗಿಸಿ ಆ ಸೇವೆಗೆ ಫಲಿತಾಂಶವಾಗಿ ಪ್ರತ್ಯಕ್ಷ ರೂಪದಲ್ಲಿ ನನ್ನಲ್ಲಿ ಆ ಗುಣವನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

8. ನಾನು ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ ಸ್ವಯಂನ ಕಲ್ಯಾಣದೊಂದಿಗೆ ವಿಶ್ವಕಲ್ಯಾಣವನ್ನು ಮಾಡುವ ಡಬಲ್ ಕಿರೀಟಧಾರಿ.

ತೀವ್ರ ಪುರುಷಾರ್ಥ ಎಂದರೆ ಸ್ವಯಂ ಮತ್ತು ಇತರ ಆತ್ಮರ ಸೇವೆ ಎರಡೂ ಜೊತೆಯಲ್ಲಿ ನಡೆಯಬೇಕು. ಪ್ರತಿ ಸೆಕೆಂಡ್, ಪ್ರತಿ ಸಂಕಲ್ಪದಲ್ಲಿ ಸ್ವಕಲ್ಯಾಣ, ವಿಶ್ವ ಕಲ್ಯಾಣದ ಭಾವನೆ ಜೊತೆಯಲ್ಲಿ ಇರಬೇಕು ಒಂದು ಕ್ಷಣದಲ್ಲಿ ಎರಡು ಕಾರ್ಯಗಳನ್ನು ಮಾಡಬೇಕು ಆಗಲೇ ಡಬಲ್ ಕಿರೀಟಧಾರಿ ಆಗಬಲ್ಲಿರಿ. ಒಂದು ವೇಳೆ ಒಂದು ಸಮಯದಲ್ಲಿ ಒಂದೇ ಕಾರ್ಯವನ್ನು ಮಾಡಿದ್ದಾದರೆ ಅದಕ್ಕೆ ಪ್ರಾಲಬ್ಧವಾಗಿ ಹೊಸ ಪ್ರಪಂಚದಲ್ಲಿಯೂ ಒಂದು ಲೈಟಿನ ಕಿರೀಟ ಅರ್ಥಾತ್ ಪವಿತ್ರ ಜೀವನ, ಸುಖ ಸಂಪನ್ನ ಜೀವನ ಪ್ರಾಪ್ತಿಸುತ್ತದೆ. ಆದರೆ ರಾಜ್ಯ ಸಿಂಹಾಸನ ಅಥವಾ ಕಿರೀಟ ಸಿಗುವುದಿಲ್ಲ. ಅರ್ಥಾತ್ ಪ್ರಜಾ ಪದವಿಯನ್ನು ಪ್ರಾಲಬ್ಧವಾಗಿ ಪಡೆಯುತ್ತೀರಿ. *ಕರ್ಮ ಫಿಲಾಸಫಿ*